A 245

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರನ ಅನುಮತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನ ಸರಕಾರದವರು ದರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀನ್ಗಳನ್ನ ಇಜಾರೆದಾರನು ಆಗಿಯುಕೂಡದು. ಬಂದು ವೇಳೆ ಆಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ನಟಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪ ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಶೀಲ್ ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೊಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯತಕ್ಕ ಕಾಂಗ್ರೂರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ವುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನೂ ಅಡ್ರೆಸ್‌ಗಳನ್ನೂ ಮ್ಯುನಿಸಿಪಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಸ್ಟರ್ ಮಾಡಿಸತಕ್ಕದ್ದಿದೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದು ಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತೆಗದುಕೊಳ್ಳತಕ್ಕದ್ದು. ಬಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಯಾರ್ಮಾಡಿ ಮ್ಯುನಿಸಿಪಲ್ ಆಫಿಸಿನಲ್ಲಿ ಚಿಕಟುಯಿಸಲ್ಪಡುವದು.

ತಾರೀಖು 18ನೇ ಮೇ 1896.

ತಾರೀಖು ನೇ ಜೂ 1896.

ಕಿಲೆ ಅಗಳತೆಯಲ್ಲಿ ಕಲ್ಲುಗಳನ್ನ ಖರೀದಿಗೆ ತೆಗದುಕೊಂಡಿರುವ ಅಶೇಷ ಜನರಿಗೂ ಇದರಿಂದ ತಿಳಿಯಪಡಿಸುವದೇನಂದರೆ,—1896ನೇ ಜುಲೈ ಗುರ್ತೇ ಲಾಗಾಯತು ಮೂರು ತಿಂಗಳ ವಳಗಾಗಿ ಕಿಲೆ ಅಗಳತೆಯಲ್ಲಿ ವಿಕ್ರಯಿಸಲ್ಪಟ್ಟಿರುವ ಕಲ್ಲುಗಳನ್ನ ಆ ಸ್ಥಳದಿಂದ ಸಾಗಿಸಿಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ಮ್ಯುನಿಸಿಪಾಲಿಟಿಗೆ ಶೇರಿಸಿಕೊಳ್ಳಲ್ಪಡುವದು.

1896ನೇ ಇಸವಿ ಸೆಪ್ಟಂಬರ್ 30ನೇ ತಾರೀಖಿನ ತರುವಾಯ ಸಾಗಿಸಲು ಅಪ್ಪಣೆ ಕೊಡುವದಿಲ್ಲ.

ತಾರೀಖು 8ನೇ ಜುಲೈ 1896.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳ ಎಲೆಕ್ಷ್ಯನ್ ಚುನಾವಣೆಯನ್ನ ಬತ್ತಿ ಇಡುವದನ್ನ ಕುರಿತು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—

ಮೈಸೂರ್ ಗವರ್ನಮೆಂಟಿನವರ ಅಪ್ಪಣೆ ಅನುಸರಿಸಿ, ಜಾಲತಿ ಸಾಲಿಗೆ ಸಿಟಿ ಮ್ಯುನಿಸಿಪಾಲಿಟಿಗೆ ಶೇರಿದ ಡಿವಿಜ್ಯಗಳ ಕಮ್ಮಿಷನರುಗಳ ಎಲೆಕ್ಷ್ಯನ್ ಚುನಾವಣೆಯ ತಾರೀಖು ಇತಃಪರ ನಿಷ್ಕರ್ಷೆ ಆಗತಕ್ಕ ಬಗ್ಯೆ ಮುಂದಕ್ಕೆ ಬತ್ತಿ ಇಡಲ್ಪಟ್ಟು ಇದೆ.

ತಾರೀಖು 6ನೇ ಜುಲೈ 1896.

ಸ್ ೧೮೯೬ನೇ ಇಸವಿ ಜೂನ್ 30ನೇ ಮಕ್ಕುಮಿನ ಬೋರ್ಡು ಮೀಟಿಂಗಿನಲ್ಲಿ ಪ್ಯಾಸಾದ ರೆಜೆಲ್ಯೂಷ್ನ ಅನುಸರಿಸಿ, ಸಾದೆ ಮತ್ತು ಇದ್ದಲು ವ್ಯಾಪಾರದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಸಿಟಿ ಮಜ್ಕೂರಿನಲ್ಲಿ ಸಾದೆ ಮತ್ತು ಇದ್ದಲು ವ್ಯಾಪಾರದಾರರು ತಮ್ಮ ಅಂಗಡಿಗಳಲ್ಲಿ ಇದರ ಕೆಳಗೆ ಸೈನ್ ಮಾಡಿ ಇರುವವರಿಂದ ಕೊಡಲ್ಪಡುವ 'ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಎಂಬ" ಛಾಪುಳ್ಳಂಥಾ ಕ್ರಮವಾದ ತೂಕದ ಕಲ್ಲುಗಳನ್ನ ಉಪಯೋಗಿಸಬೇಕು ಹಾಗೆ ಛಾಪೆ ಇಲ್ಲದ ತೂಕದ ಕಲ್ಲುಗಳನ್ನ ಉಪಯೋಗಿಸದಂಥಾವರನ್ನ ಮೋಸಕೃತ್ಯಕ್ಕೆ ಗುರಿಮಾಡಿ ಲಾ ಅನುಸರಿಸಿ ಕ್ರಮ ನಡಿಸಲ್ಪಡುತ್ತೆ.

2. ಮೇಲೆಕಂಡ ಷರತ್ತುಗಳನ್ನ ಚಾಲತಿ ಇಸವಿ ಜುಲೈ ಗುರ್ವೇ ಲಾಗಾಯತು ಕೊಡಲ್ಪಡುವ ಲೈಸೆನ್ಸುಗಳಲ್ಲಿ ನಮೂದಿಸಲಾಗುತ್ತೆ.

3. ಈ ಸಂಬಂಧವಾದ ವ್ಯಾಪಾರದಾರರೆಲ್ಲರೂ ಬಂದೇ ನಮೂನೆಯಾದ ತೂಕದ ಕಲ್ಲುಗಳನ್ನ ಅಂಗಡಿಗಳಲ್ಲಿ ಉಪಯೋಗಿಸಬೇಕು. ಡಿಟೋ ನಮೂನೆ ಕಲ್ಲುಗಳನ್ನ ಮ್ಯುನಿಸಿಪಲ್ ಕಲೆಕ್ಟರ್ ಆಫಿಸಿನಲ್ಲಿ ನೋಡಬಹುದು. ಲೈಸೆನ್ಸು ತೆಗೆದುಕೊಳ್ಳುವ ವೇಳೆ ಡಿಟೋ ಕಲ್ಲುಗಳನ್ನ ಹಾಜರ್ಮಾಡಬೇಕು. ಅವುಗಳನ್ನ ಅಜಮಾಯಿಷಿಯಿಂದ ಛಾರ್ಜು ಇಲ್ಲದೆ ಛಾಪೆ ಹಾಕಿ ಕೊಡಲ್ಪಡುವದು. ಮ್ಯುನಿಸಿಪಾಲಿಟಿಯಿಂದ ಅಂಥಾ ತೂಕದ ಕಲ್ಲುಗಳನ್ನ ಸರ್ಕಾರ ಆಗಬೇಕೆಂಬ ಇಷ್ಟವುಳ್ಳವರಿಗೆ ಖರೀದಿಗೆ ಕೊಡಿಸಲಾಗುವದು.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ತಾರೀಖು 17ನೇ ಜುಲೈ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಾಯಂಗುತ್ತಾ ಬಾಕಿದಾರರಾದ ಜಯಾಚಾರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ನಮೂದಾಗುವ ಛಾರ್ಫಿಟೂವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಅಮಲ್ದಾರ್ರ ಕಚೇರೀಲಿ 1896ನೇ ಇಸವಿ ಆಗಸ್ಟ್ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895—96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಪ್ಪೈಯಲ್ಲಿ ನಮೂದಿಸಿರುವ ತಪ್ಪೀಲ್ ಮೇರಿಗೆ 44—13—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ, ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ